Local Fund Dispensary for Kolala Village, Koratagere Taluk.

Q.—376. Sri M. MUDDURAMIAH (Koratagere-Madhugiri).—

Will the Government be pleased to state :—

(*a*) whether there is any representation from Kolala people of Koratagere Taluk urging for a Local Fund Dispensary ;

(*b*) if so, the action taken in this matter ?

A.—Sri T. CHANNIAH (Minister for Public Health and Local Self-Government).—

(*a*) No such representation has been received.

(*b*) Does not arise.

Hospital for Srirampuram.

Q.—602. Sri V. R. NAIDU (Malleswaram).—

Will the Government be pleased to state :—

(*a*) the number of new hospitals decided to be opened this year in the State ;

(*b*) whether they would decide to open a hospital in Srirampuram from where representations are being made since a number of years, at least this year ?

A.—Sri T. CHANNIAH (Minister for Public Health and Local Self-Government).—

(*a*) Seven dispensaries.

(*b*) Will be examined.

THE MYSORE (PERSONAL AND MISCELLANEOUS) INAMS ABOLITION (AMENDMENT) BILL, 1956.

Motion to consider

Sri A. G. RAMACHANDRA RAO (Minister for Law and Education).—Sir, I move :

"That the Mysore (Personal and Miscellaneous) Inams Abolition (Amendment) Bill, 1956, be taken into consideration."

Sir, I may bring it to the notice of this House that the Government of India suggested that a provision may be made for conferring permanent and hereditary rights to the tenants-at-will and inamdars. There was no provision made for this purpose in the original Bill and it is on their suggestion that we have brought forward this Bill.

I may also bring to the notice of this House that a similar provision has been made in the Mysore (Religious and Charitable) Inams Abolition Bill, 1955. It is therefore proposed to insert a new Chapter called Chapter 3A in the Mysore (Personal Miscellaneous) Inams Abolition Bill, 1951 and make consequential changes. A few verbal alterations have also been made.

This is a non-controversial measure. This is a measure which will bring this Act on par with the other enactment and I commend this Bill for the consideration of this House.

Mr. SPEAKER.—Motion moved :

"That the Mysore (Personal and Miscellaneous) Inams Abolition (Amendment) Bill, 1956, be taken into consideration."

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ಮತಸಂಬಂಧವಾದ ಮತ್ತು ಧರ್ಮಾರ್ಥ ಸಂಬಂಧವಾದ ಇನಾಂತಿಗಳಿಗೆ ಸಂಬಂಧಪಟ್ಟ ಮಸೂದೆ ಈಗ ಏನಾಗಿದೆ ಎನ್ನುವುದನ್ನು ಸರ್ಕಾರದವರು ತಿಳಿಸಬೇಕು.

Mr. SPEAKER.—Merely because a reference has been made to that Inam Bill, you cannot say that.

ಶ್ರೀ ಎಸ್. ಗೋಪಾಲಗೌಡ.—ನನಗೆ information ಬೇಕು, clarification ಬೇಕು, ಈ ಮಸೂದೆ ಏನಾಗಿದೆ, ಇದನ್ನು ಯಾವಾಗ ಕಾನೂನು ಮಾಡಲಾಯಿತು, ಇದರ ಮೇಲೆ ರೂಲ್ಸ್ ಮಾಡಿದ್ದಾರೆಯೇ, ಮಸೂದೆಯನ್ನು ಜಾರಿಗೆ ಕೊಟ್ಟಿರುತ್ತಾರೆಯೇ, ಅದರ ಪ್ರಕಾರ ಷಿಕ್ಮಿದಾರನು ಅನುಭವಿಸುತ್ತಿದ್ದಾನೆಯೇ, ಎಂಬುದನ್ನು ದಯವಿಟ್ಟು ವಿವರಿಸಿದರೆ ಈ ತಿದ್ದುಪಡಿ ಮಾಡುವುದರ ಅವಶ್ಯಕತೆ ಇದೆಯೇ ಎನ್ನುವುದನ್ನು ನಾವು ಪರಿಶೀಲನೆ ಮಾಡಬಹುದು.

Sri A. G. RAMACHANDRA RAO.—I will give him all that information, Sir. ಎರಡು ಎನಾಕ್ಟ್‌ಮೆಂಟುಗಳಿಗೂ ರೂಲ್ಸು ತಯಾರು ಮಾಡುತ್ತಿದ್ದಾರೆ. ರೂಲ್ಸು ತಯಾರಾದ ತಕ್ಷಣ ಅವನ್ನು ಜಾರಿಗೆ ಕೊಡುತ್ತೇವೆ.

Mr. SPEAKER.—I find this question was raised during the last Session of the Assembly. There was some difference between this legislation and the other legislation. When rules are to be framed, they must be uniform for both. The Government found it difficult to frame rules and therefore they have brought this amendment.

*Sri T. MARIAPPA (Mysore City—North).—I would like to have a little clarification, Sir. In the draft Second Five-Year Plan adumbrated by the Government, they have made provisions for the acquisition of these inams. In the final plan, as emerged,—it is still a draft from the point of view of the Government of India—there is practically no provision for the acquisition of inams. Therefore the question of framing the Rules and giving effect to the Act does not arise at all. If the Government are really serious, let us take the time of the House for amending the Act and let us strengthen the hands of the Government. Suppose it is difficult to make provision under the Second Five-Year Plan, let us not push on this Bill. Or if you finally decide not to make provision in view of the opposition, let us make it clear. Then we will embark on legislation which will be useful.

Sri A. G. RAMACHANDRA RAO.—Sir, Government is very serious and also sincere in attempting to introduce this Bill and not to leave it as a dead letter. In order to put it into effect, two things are necessary. One is to frame the rules and the other is to make necessary provision in the Budget. I have just now said that we are in the process of framing the rules. Similarly, we will try our best to make provision for payments during the next ten years. We are trying to see how best to make provision. Even if we cannot pay money immediately, we can issue bonds payable after ten years. That is not a great problem. Meanwhile, we are trying to implement the legislation as early as possible.

*ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಮಾನ್ಯ ಸಚಿವರು ಈಗ ತಾನೆ ಸಭೆಯ ಮುಂದೆ ಸಭೆಯ ಪರಿಶೀಲನೆಗಾಗಿ ಮೈಸೂರು ಸಂಸ್ಥಾನದ (ವ್ಯಕ್ತಿ ಸಂಬಂಧವಾದ ಮತ್ತು ವಿವಿಧ ರೀತಿಯ) ಇನಾಂತಿಗಳ ರದ್ದಿಯಾತಿಗೆ ಸಂಬಂಧಪಟ್ಟ ಮಸೂದಾ ಕಾನೂನನ್ನು ತಿದ್ದುಪಡಿ ಮಾಡಬೇಕು ಎಂದು ಮಂಡಿಸಿರತಕ್ಕ ಮಸೂದೆಯ ವಿಷಯದಲ್ಲಿ ನಾನು ಕೆಲವು ವಿಷಯಗಳನ್ನು ಪ್ರಸ್ತಾವಿಸಬೇಕು ಎಂದು ಇದ್ದೇನೆ. ಮೊಟ್ಟ ಮೊದಲನೆಯ ಆರೋಪಣೆ ಈ ಸರ್ಕಾರದ ಮೇಲೆ ನಾನು ಮಾಡಬೇಕಾದ್ದೇನೆಂದರೆ, ಈ ಸರ್ಕಾರಕ್ಕೆ ಕಾರ್ಯತಃ ಈ ಮಧ್ಯವರ್ತಿಗಳನ್ನು—ಉಳುತ್ತ ಇರುವವನಿಗೂ ಮತ್ತು ಸರ್ಕಾರಕ್ಕೂ ಮಧ್ಯೆ ಇರತಕ್ಕ ಮಧ್ಯವರ್ತಿಗಳನ್ನು—ಸಂಪೂರ್ಣವಾಗಿ ತೊಡೆದುಹಾಕತಕ್ಕ ಮನೋಭಾವ ಇಲ್ಲವೆನ್ನುವುದು. ಅದರಿಂದಲೇ ಆ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆಂದು ಅವರೇನಾದರೂ ಹೇಳುವುದಾದರೆ ಅವರಿಗೆ ಆ ತತ್ವವನ್ನು ಕಾರ್ಯಗತಮಾಡುವುದಕ್ಕೆ ಇಷ್ಟವಿಲ್ಲ ಅಥವಾ ದಕ್ಷತೆಯಿಲ್ಲ ಅಥವಾ ಒಂದು ವೇಳೆ ದಕ್ಷತೆ ಇದ್ದರೂ ಕೂಡ ಅಂಥ ಒಂದು ಕಾರ್ಯಕ್ರಮಕ್ಕೆ ಒಂದು ಅಡ್ಡಿಯನ್ನು ತಂದು ಅದು ಸಾಧ್ಯವಾಗದ ರೀತಿಯಲ್ಲಿ ಕೆಲವು ವ್ಯಕ್ತಿಗಳು ಅವರನ್ನು ಪ್ರತಿಭಟಿಸುತ್ತಿರಬಹುದು ಎಂಬುದು ಸ್ಪಷ್ಟವಾಗಿದೆ. ಈ ಒಂದು ಮಸೂದೆಯಿಂದ ಅದು ಬಹಳ ಚೆನ್ನಾಗಿ ಅರ್ಥವಾಗಿದೆ. ಇದು ಷಿಕ್ಮಿಗಳಿಗೆ ಸಂಬಂಧಪಟ್ಟ ಹಾಗೆ ಕೇವಲ ವ್ಯಕ್ತಿ ಸಂಬಂಧ ಮತ್ತು ವಿವಿಧ ರೀತಿಯ ಇನಾಂತಿಗಳಿಗೆ ಸಂಬಂಧಪಟ್ಟ ವಿಷಯ. ಈ ಇನಾಂ ಪದ್ಧತಿ ರದ್ದಾಗಬೇಕೆಂಬ ತತ್ವವನ್ನು ಕಾಂಗ್ರೆಸ್ ಮತ್ತು ದೇಶದ ಇತರ ಪ್ರಗತಿಪರರು ಒಪ್ಪಿ ಬಹಳ ವರ್ಷಗಳಿಂದ ಇದ್ದ ನ್ಯೂನತೆಯನ್ನು ಕಾರ್ಯತಃ ನಿರ್ಮೂಲ ಮಾಡತಕ್ಕ ಒಂದು ಮಸೂದೆಯನ್ನು ತಂದುದು ಈಗ. ಅದರಲ್ಲೂ ಎಷ್ಟು ವಿಳಂಬವಾಗಿದೆ ಎಂಬುದನ್ನು ನಾವು ಶಬ್ದಗಳಿಂದ ಹೇಳಿ ಪ್ರಯೋಜನವಿಲ್ಲ. ನಾವೂ ಕೂಡ ಬಹಳ ಕಾತರರಾಗಿದ್ದೇವೆ, ಬೇರೆ ಯಾರಿಗಿಂತಲೂ ನಾವು ಕಡಮೆಯಿಲ್ಲ, ನಮ್ಮ ಗುರಿಯೂ ಸ್ವಲ್ಪ ಹೆಚ್ಚುಕಡಮೆ ಸಮಾಜವಾದವೇ ಆಗಿಬಿಟ್ಟಿದೆ, ಆದ್ದರಿಂದ ನಾವು ಆ ಕಡೆಗೆ ಹೋಗಬೇಕೆಂಬುದೇ ನಮ್ಮ ಗುರಿ ಕೂಡ ಆಗಿದೆ ಎಂದು ಬಹಳವಾಗಿ ಭಾಷಣಗಳಲ್ಲಿ ಮತ್ತು ಬೇರೆ ಸಂದರ್ಭಗಳಲ್ಲಿ ಸರ್ಕಾರದವರು ಹೇಳುವುದುಂಟು, ಆದರೆ ಕಾರ್ಯತಃ ಈ ಮಸೂದೆಯ ಬಗ್ಗೆ ಸರ್ಕಾರ ತೋರಿಸಿರತಕ್ಕ ತಾತ್ಸಾರ ಮತ್ತು ನಿಷ್ಕ್ರಿಯತೆ ನಮ್ಮ ಅಭಿಪ್ರಾಯದಲ್ಲಿ ಅಕ್ಷಮ್ಯ ಎಂತಲೇ ಹೇಳಬೇಕಾಗಿದೆ. ಇನ್ನೂ ನಾವು ರೂಲ್ಸ್‌ಗಳನ್ನು ಫ್ರೇಂ ಮಾಡುತ್ತಿದ್ದೇವೆಂದು ಸರ್ಕಾರದವರು ಹೇಳುತ್ತಾರೆ. ಯಾವ ರೀತಿ ರೂಲ್ಸ್ ಫ್ರೇಮ್ ಮಾಡುತ್ತಾರೆ, ಯಾರನ್ನು ಕೇಳಿ ಮಾಡುತ್ತಾರೆ, ಕಷ್ಟವೇನು ಎಂಬುದು ನಮಗೆ ಗೊತ್ತಿಲ್ಲ. ಬಹುಶಃ ಅದು ಬಹಳ ಕಷ್ಟದ ಕೆಲಸವೆಂದು ಕಾಣುತ್ತದೆ. ಯಾರ ಸಲಹೆ ಕೇಳಿ ಮಾಡುತ್ತಿದ್ದಾರೆಯೋ ಏನೋ ನನಗೆ ಗೊತ್ತಿಲ್ಲ. ಅಂತೂ ಈ ವಿಳಂಬವನ್ನು ನನಗಂತೂ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಬೇರೆ ಏನಾದರೂ ಕೈವಾಡಗಳಿದ್ದು ಈ ಇನಾಂತಿ ರದ್ದಾಗಬಾರದು ಎಂದು ಹೇಳುವ ಯಾವುದಾದರೂ ಆಸಕ್ತವರ್ಗವಿದ್ದು ಅದು ಈ ಸರ್ಕಾರದ ಮೇಲೆ ತನ್ನ ಪ್ರಭಾವ ಸಂಪೂರ್ಣವಾಗಿ ಬೀರಿದ್ದರೆ ಆಗ 'ರೈತರೇನೇ ಆಗಲಿ, ಅವರು ಸಾಯಲಿ ಅಥವಾ ಬದುಕಲಿ, ಅವರ ಪ್ರಶ್ನೆ ನಮಗೆ ಅಪ್ರಕೃತ, ನಮ್ಮ ಉಳಿವನ್ನು ನಾವು ನೋಡಬೇಕು' ಎಂದು ಮುಂದುವರಿಯುವುದೂ ವಾದಮಾಡುವುದೂ ಸರಿಯಲ್ಲ; ಅಂಥವರಿಗೆ ಸಹಾಯ ಮಾಡುವುದಕ್ಕಾಗಿ ಈ ರೀತಿ ವಿಳಂಬ ಮಾಡುತ್ತಿದ್ದಾರೆಂದು ಕಾಣುತ್ತದೆ. ಈ ವಿಷಯದಲ್ಲಿ ನಾವು ಮೂರು ಮಸೂದೆಗಳನ್ನು ಪಾಸು ಮಾಡಿದ್ದೇವೆ, ಕಾನೂನು ಮಾಡಿದ್ದೇವೆ. ಒಂದು ಸಾರ್ವತ್ರಿಕವಾಗಿ ಎಲ್ಲಾ ಷಿಕ್ಮಿದಾರರಿಗೂ

(ಶ್ರೀ ಎಸ್. ಗೋಪಾಲಗೌಡ.)

ಸಂಬಂಧಪಟ್ಟ ಕಾನೂನು, ಟೆನೆನ್ಸಿ ಕಾನೂನು; ಇನ್ನೊಂದು ಮತ ಸಂಬಂಧಪಾದ ಮತ್ತು ಧಾರ್ಮಿಕ ಇನಾಂತಿಗಳಿಗೆ ಸಂಬಂಧಪಟ್ಟ ಮಸೂದೆ; ಮೂರನೆ ಯದು ವ್ಯಕ್ತಿಸಂಬಂಧವಾದ ಮತ್ತು ವಿವಿಧ ರೀತಿಯ ಇನಾಂತಿಗಳಿಗೆ ಸಂಬಂಧಪಟ್ಟ ಈಗ ನಮ್ಮ ಮುಂದಿ ರುವ ಕಾನೂನು. ಮೊದಲು ನಾವು ಮತಸಂಬಂಧ ವಾದ ಇನಾಂತಿಗಳಿಗೂ ಮತ್ತು ವ್ಯಕ್ತಿಸಂಬಂಧವಾದ ಇನಾಂತಿಗಳಿಗೂ ಒಂದೇ ಕಾನೂನನ್ನು ಮಾಡಬಹು ದೆಂದು ಹೇಳಿದ್ದಕ್ಕೆ ಎರಡಕ್ಕೂ ಒಂದೇ ಕಾನೂನನ್ನು ಅನ್ವಯಿಸುವುದಕ್ಕಾಗುವುದಿಲ್ಲ, ರಾಜ್ಯಾಂಗದ ಪ್ರಕಾರ ನಮಗೆ ತೊಡಕು ಬರುತ್ತದೆ ಎಂದು ಹೇಳಿದರು. ಅದನ್ನು ನಾವು ಒಪ್ಪಿಕೊಂಡೆವು; ಒಂದು ಮಸೂದೆ ತರುವುದಕ್ಕೆ ಬದಲಾಗಿ ಎರಡು ಮಸೂದೆಗಳನ್ನು ತಂದ ಮಾತ್ರಕ್ಕೆ ಅದರಿಂದ ಏನೂ ಹೆಚ್ಚಿನ ತೊಂದರೆಯಾಗ ಲಾರದೆಂದು ಒಪ್ಪಿದೆವು. ಆದರೆ ಎಷ್ಟು ದಿವಸಗಳು ಎಷ್ಟು ವರ್ಷಗಳು ಕಳೆದಿವೆ, ಎಷ್ಟು ವಿಳಂಬ ವಾಗಿದೆ ಎಂಬುದನ್ನು ನೋಡುವುದಾದರೆ ಕಾಂಗ್ರೆಸ್ ಸರ್ಕಾರ ಅಧಿಕಾರ ವಹಿಸಿಕೊಂಡು ಎಂಟು ವರ್ಷ ಗಳಾಗಿವೆಯಾದರೂ ಇನ್ನೂ ಕಾರ್ಯಗತವಾಗಿಲ್ಲ. ಇದನ್ನು ಮಾಡಬೇಕೆಂದು ಕಾಂಗ್ರೆಸ್ಸಿನವರು ಹೇಳು ವುದಕ್ಕೆ ಷುರುಮಾಡಿ ಮೂವತ್ತು ವರ್ಷಗಳಾಗಿವೆ. ಹಿಂದೇನೋ ಬೇರೆ ಸರ್ಕಾರವಿತ್ತೆಂದು ಹೇಳಬಹುದು. ಆದರೆ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದಮೇಲೂ ಕೂಡ ಈ ವಿಚಾರ ಬರೀ ಆಶಯಲ್ಲೇ ಉಳಿಯಿತೇ ಹೊರತು ಕೃತಿಗೆ ಇಳಿಯಲೇ ಇಲ್ಲ. ಈ ಸರ್ಕಾರ ಬಂದಮೇಲಾದರೂ ಆಗಬಹುದೆಂದು ಕೆಲವರು ಆಸೆ ಪಟ್ಟಿದ್ದರು, ಏನೋ ಒಂದು ದೊಡ್ಡ ಹೆಜ್ಜೆ ಈ ಸರ್ಕಾರ ಇಡಬಹುದೆಂದು ಭಾವಿಸಿದ್ದರು. ನಾನು ಮಾತ್ರ ಆಸೆಪಟ್ಟಿರಲಿಲ್ಲ, ಏಕೆಂದರೆ ಇದರಲ್ಲಿರುವ ನ್ಯೂನತೆ, ಫಂಡಮೆಂಟಲ್ ಡಿಫೆಕ್ಟ್ ಏನೆಂಬುದು ನನಗೆ ಗೊತ್ತು.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಆ ಫಂಡ ಮೆಂಟಲ್ ಡಿಫೆಕ್ಟ್ ಏನೆಂಬುದು ಗೊತ್ತಾಗಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಕಾಂಗ್ರೆಸ್ ಸಂಸ್ಥೆ ಯಲ್ಲಿ ಎಲ್ಲಾ ಹಿತಗಳನ್ನೂ ಪ್ರತಿಬಿಂಬಿಸುವ ಜನರಿರು ವುದರಿಂದ ಯಾರಾದರೂ ಒಬ್ಬರು ಈ ಹೆಜ್ಜೆ ಇಡ ಬೇಕೆಂದರೆ ಇನ್ನೊಬ್ಬರು ಬೇರೆ ಹೆಜ್ಜೆ ಇಡಬೇಕೆಂದು ಹೇಳುತ್ತಾರೆ. ಒಂದು ಕಾಲು ಪೂರ್ವಕ್ಕೆ ಇನ್ನೊಂದು ಕಾಲು ಪಶ್ಚಿಮಕ್ಕೆ ಇಟ್ಟರೆ ಹೇಗೋ ಹಾಗೆ ಈಗ ಎರಡು ಮುಖದ ಹೆಜ್ಜೆಯಾಗಿದೆ. ಒಂದು ವ್ಯಕ್ತಿ ಹಿಂದಕ್ಕೆಳೆಯುತ್ತದೆ, ಇನ್ನೊಂದು ವ್ಯಕ್ತಿ ಮುಂದಕ್ಕೆ ಎಳೆಯುತ್ತದೆ, ಹೀಗಿದೆ ಸಂದರ್ಭ. ನಾನು ಅಂಥ ಆಸೆ ಪಡದಿದ್ದರೂ, ಕೆಲವರು ಕಾಂಗ್ರೆಸ್ಸಿನ ಹೇಳಿಕೆ, ಮಾನಿ ಫೆಸ್ಟೋ ಅನ್ನು ನೋಡಿ ಆಸೆಪಟ್ಟಿದ್ದರು, ತಮಗೆ ಅನು ಕೂಲವಾಗುತ್ತದೆಂದು ಭಾವಿಸಿದ್ದರು ಕಾದು ಕಾದು ಬಹುಶಃ ಅವರಿಗೆ ತಾವು ಮೋಸಹೋಗಿದ್ದೇವೆಂಬುದು ತಿಳಿದಿರಬೇಕು. ಈ ರೀತಿ ಉಪಕಾರ ಮಾಡುವ ಮನೋ ಭಾವವುಳ್ಳ ಜನರು ಇಲ್ಲಿಲ್ಲ, ಬಡವರ ಹಿತರಕ್ಷಣೆ ಮಾಡುವ ಅಪೇಕ್ಷೆ ಅವರಿಗಿಲ್ಲ ಎಂಬುದು ಅನೇಕರಿಗೆ ಮನವರಿಕೆಯಾಗಿರಬೇಕು ಎಂದು ನನಗೆ ತೋರುತ್ತದೆ. ಮುಖ್ಯವಾಗಿ ಇನಾಂ ಪದ್ಧತಿಯಿರುವ ಕಡೆ ಕೆಲಸ ಮಾಡುವ ಷಿಕ್ಮಿದಾರರಿಗೆ ವಿಚಾರ ಮನವರಿಕೆಯಾಗಿರ ಬೇಕು. ನಾನೇನೂ ಪ್ರಚಾರ ಮಾಡುತ್ತಿಲ್ಲ. ಕಾರ್ಯಗತ ಮಾಡತಕ್ಕ ಒಂದು ಮನೋಭಾವ, ಪ್ರಾಮಾಣಿಕತೆ ಸರ್ಕಾರಕ್ಕಿರಬೇಕೆಂಬುದು ಬಹು ಪ್ರಾಮುಖ್ಯವಾದ ವಿಷಯ; ಯಾವುದೇ ಮಸೂದೆ ಯಾದರೂ ಇದು ಬಹಳ ಪ್ರಾಮುಖ್ಯವಾದ ವಿಷಯ. ಬಹುಶಃ ನಾನು ಪ್ರಶ್ನೆಮಾಡಿದರೆ ಸರ್ಕಾರದವರು ಯಾವಾಗಲೂ ವಿರೋಧ ಪಕ್ಷಕ್ಕೆ ಸೇರಿದವರು ಟೀಕಿಸು ವುದು ಸ್ವಾಭಾವಿಕವೆಂದು ಹೇಳಬಹುದು. ಈಗ ಈ ಮೂಲ ಪ್ರಶ್ನೆಯನ್ನು ಶ್ರೀ ಮರಿಯಪ್ಪನವರೇ ಹಾಕಿ ನನ್ನ ಸಂದೇಹವನ್ನು ದೂರಮಾಡಿದ್ದಾರೆ. ಇದು ನನಗೆ ಮಾತ್ರ ಇರುವ ಸಂದೇಹವಲ್ಲ ಶ್ರೀ ಮರಿಯಪ್ಪನವ ರಿಗೂ ಇರುವ ಸಂದೇಹ ಎಂದು ಹೇಳಿದಮೇಲೆ ಬಹು ಮಂದಿ ಈ ಸಭೆಯ ಮಾನ್ಯ ಸದಸ್ಯರು ಈ ಸಂದೇಹ ಹೊಂದಿರುವರೆಂದು ನಾನು ನಿಸ್ಸಂದೇಹವಾಗಿ ಹೇಳ ಬಹುದು. ಇದರಲ್ಲಿ ಯಾವ ಭಿನ್ನಾಭಿಪ್ರಾಯವಿರು ವುದಕ್ಕೂ ಸಾಧ್ಯವಿಲ್ಲ. ಆದ್ದರಿಂದ ಮೂಲತಃ ಈ ವಿಷಯಗಳನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರ ದವರೇನಾದರೂ ಮನಸ್ಸು ಮಾಡಿದ್ದಾರೆಯೆ ಎಂಬುದು ಸ್ಪಷ್ಟವಾಗಬೇಕಾಗಿದೆ.

ಇನ್ನೊಂದು ವಿಷಯ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತದೆ. ಷಿಕ್ಮಿಗಳಿಗೆ ಸಂಬಂಧಪಟ್ಟ ಮಸೂದೆ ಚರ್ಚೆಯಾದಾಗ ಒಂದು ಸಣ್ಣ ಸಮಿತಿಯನ್ನು ಮಾಡಿ ಅಲ್ಲಿ ಆ ವಿಷಯ ಚರ್ಚೆಮಾಡಿದರು. ಆಗಲೂ ಕೂಡ ಶ್ರೀ ಲಿಂಗಾರೆಡ್ಡಿಯವರು ಬಹಳವಾಗಿ ಟೆನೆಂಟ್ಸ್ ಅಟ್ ವಿಲ್ ಬಗ್ಗೆ ಚರ್ಚೆಮಾಡಿದರು. ಟೆನೆಂಟ್ಸ್ ಅಟ್ ವಿಲ್ ಎಂಬುದು ಈಗಿನ ಕಾಲಕ್ಕೆ ಸರಿಯಾದು ದಲ್ಲ, ಎಲ್ಲರಿಗೂ ಶಾಶ್ವತವಾದ ಹಕ್ಕುಗಳನ್ನು ಕೊಟ್ಟು ಉಳುಮೆ ಮಾಡುವುದಕ್ಕೆ ಖಂಡಿತ ಅವಕಾಶ ಕೊಡ ಬೇಕು ಎಂದು ಹೇಳಿದರೂ ಆಗ ಬಹು ಜನರು ಒಪ್ಪ ಲಿಲ್ಲ; ಇದನ್ನು ಸಮಿತಿಯಲ್ಲೂ ಮತ್ತು ಹೊರಗಡೆಯೂ ಹೇಳಿದರು. ಇದು ಬರೀ ನಮ್ಮ ಉದ್ದೇಶವಾಗಿ ತ್ತೆಂದು ಕೆಲವರು ತಪ್ಪು ತಿಳಿದುಕೊಂಡಿದ್ದಾರೆ. ಒಬ್ಬ ಸದಸ್ಯರು, ಯಾರೋ ಒಬ್ಬ ಮೋಟಾರು ನಡೆಸುತ್ತಿ ದ್ದರೆ ಅವನಿಗೆ ಮೋಟಾರನ್ನೇ ಕೊಟ್ಟುಬಿಡುತ್ತೀರಾ ಎಂದು ಕೇಳಿದರು. ಆ ಕಾಲ ಬರುತ್ತದೆ, ಬಹಳ ದೂರವಿಲ್ಲ ಎಂದು ಹೇಳಬೇಕಾಯಿತು. ಟೆನೆಂಟ್ಸ್ ಅಟ್ ವಿಲ್‌ಗೆ ಉಳುಮೆ ಮಾಡುವ ಹಕ್ಕನ್ನು ಕೊಟ್ಟರೆ ಬಹಳ ದೊಡ್ಡ ಅನ್ಯಾಯವಾಗುತ್ತದೆ ಎಂಬ ಅಭಿ ಪ್ರಾಯವನ್ನು ಹಿಂದೆ ವ್ಯಕ್ತಪಡಿಸಿದರು. ಅದೇ ಅಭಿ ಪ್ರಾಯವನ್ನು ಕೇಂದ್ರ ಸರ್ಕಾರದವರು ಸೂಚಿಸಿದ್ದಾ ರೆಂದು ಮಸೂದೆಯ ಉದ್ದೇಶ ಮತ್ತು ಕಾರಣಗಳ ವಿವರದಲ್ಲಿ ಸರ್ಕಾರದವರು ಹೇಳಿದ್ದಾರೆ. ನಾನು ಹಿಂದೆ ಮಾಡಿದ ಪ್ರಯತ್ನ ನಿಷ್ಫಲವಾಯಿತು. ಈ ದಿವಸ ಭಾರತ ಸರ್ಕಾರ ಹೇಳಿರುವುದರಿಂದ ತಿದ್ದುಪಡಿ ಮಾಡಬೇಕಾಗಿದೆ.

1-30 P.M.

ಅಂತೂ ಈ ರೀತಿಯಾಗಿ ಈ ವಿಷಯದಲ್ಲಿ ಕೆಲವು ಕ್ಷಿವಾದಗಳು ನಡೆಯುತಿ ವೆ. ಈ ವಿಚಾರವಾಗಿ ಎಷ್ಟೆಷ್ಟು ವಿಳಂಬವಾಗಬೇಕೋ ಅಷ್ಟೂ ನಡೆಯುತ್ತಿದೆ. ಆದರೆ ನಾನು ಇತ್ತೀಚೆಗೆ ರೈತರಬಳಿ ಹೋಗಿ ಅವರ ಸಂಬಂಧವನ್ನಿಟ್ಟುಕೊಂಡುದರಿಂದ ಈಗ ಹಾಲಿ ಈ ಭೂಸಂಬಂಧವಾದ ವಿಚಾರಗಳು ಯಾವ ಪ್ರಯೋಜನವಿಲ್ಲದಿರು ತ್ತವೆಂಬ ವಿಚಾರ ನನಗೆ ಚೆನ್ನಾಗಿ ಅರ್ಥವಾಗಿದೆ. ಈ ದಿವಸ ಈ ಗೇಣೀದಾರರಿಗೂ, ಗುತ್ತಿಗೆದಾರರಿಗೂ ಮತ್ತು ಜಮೀನ್ದಾರರಿಗೂ ಎಂದರೆ ಜಮೀನಿನ ಮಾಲೀಕ ಒಬ್ಬ ವ್ಯಕ್ತಿಯಾಗಿರಲಿ ಅಥವಾ ಅದು ಮುಜರಾಯಿ ಸಂಸ್ಥೆಗೇ ಸೇರಿರಲಿ ಅಥವಾ ಇನಾಂ ಭೂಮಿಯಾಗಿರಲಿ ಅಥವಾ ಖಾಸಗೀಯವರಿಗೇ ಸೇರಿ ರಲಿ ಅಂತೂ ಇವರ ಬಾಂಧವ್ಯ ಮುಂದುವರಿದು ಕೊಂಡು ಹೋಗಲು ಸಾಧ್ಯವೇ ಇಲ್ಲ. ಗೇಣಿದಾ

ರರೂ, ಗುತ್ತಿಗೆದಾರರೂ ಮುಂದುವರಿಯಲು ಅವಕಾಶವೂ ಇಲ್ಲ. ಈವರೆಗೆ ಭೂಮಿ ಒಬ್ಬರ ಹೆಸರಿನಲ್ಲಿದ್ದುಕೊಂಡು, ಎಂದರೆ, ಖಾತೆ ಒಬ್ಬ ವ್ಯಕ್ತಿಯ ಅಥವಾ ದೇವರ ಅಥವಾ ಒಂದು ಸಂಸ್ಥೆಯ ಹೆಸರಿಗಿದ್ದು, ಅಂಥ ಭೂಮಿಯನ್ನು ಬೇರೆ ಜನರು ಉಳುಮೆ ಮಾಡಿಕೊಂಡು ಬಂದಿರುತ್ತಾರೆ. ಹೀಗೆ ಇದೊಂದು ಹಳೆಯ ಸರಂಜಾಮುಷಾಹಿ ಪದ್ಧತಿಯ ಪ್ರಕಾರ ನಡೆದುಕೊಳ್ಳುತ್ತಲೇ ಬಂತು. ಆದರೆ ರೂಪದಲ್ಲಿ ಇದೊಂದು ಸ್ಥಿರ ಆಸ್ತಿ. ಇದಕ್ಕೆ ಬೆಲೆಯಿದೆ. ಈ ಹಿಂದೆಲ್ಲಾ ಬಂಡವಾಳಗಾರರು ತಾವು ಸಂಪಾದಿಸಿದ ಅಥವಾ ಶೇಖರಣೆಮಾಡಿದ ಹಣವನ್ನೆಲ್ಲಾ ಈ ಭೂಮಿ ಮೇಲೆ ಹಾಕುತ್ತಿದ್ದರು. ಆ ದಿವಸ ಈ ಬಂಡವಾಳಗಾರರು ತಮ್ಮ ಹಣವನ್ನು ಎಂದರೆ ನೂರು ರೂಪಾಯಿಗಳನ್ನು ಬಡ್ಡಿಗೆ ಹಾಕಿದರೆ ಅದರಿಂದ ಏನು ಉತ್ಪತ್ತಿ ಬರುತ್ತದೆ ಎನ್ನುವುದನ್ನು ನೋಡಿಕೊಂಡು ಎಲ್ಲಿ ಆದಾಯ ಹೆಚ್ಚಾಗಿ ಬರುತ್ತದೆ ಎಂಬುದಾಗಿ ಅವರಿಗೆ ತೋಚಿತೋ ಅಂಥಾದ್ದರಮೇಲೆ ಹಣ ಹಾಕುತ್ತಾ ಹೋದರು. ಹೀಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಹಿಂದೆ ಜನರು ಹೆಚ್ಚು ಹೆಚ್ಚು ಹಣವನ್ನು ಭೂಮಿಯ ಬಗ್ಗೆ ವಿನಿಯೋಗ ಮಾಡಲು ಪ್ರಾರಂಭವಾಯಿತು. ಇಷ್ಟೇ ಅಲ್ಲದೆ ಯುದ್ಧಪೂರ್ವ ಅನೇಕ ಕಡೆಗಳಲ್ಲಿ ರೈತರು ಬೆಳೆಯತಕ್ಕ ಸಾಮಾನುಗಳಿಗೆ ಸರಿಯಾದ ಬೆಲೆ ಸಿಕ್ಕದೆ ಹೋದುದರಿಂದ ಜಮೀನುಗಳ ಬೆಲೆ ಬಹಳವಾಗಿ ಇಳಿದುಹೋಯಿತು. ಆಗ ಅನೇಕರು ಕಂದಾಯವನ್ನೂ ಸಹ ಕಟ್ಟಲು ಸಾಧ್ಯವಾಗದೆ ತಮ್ಮ ಭೂಮಿಗಳನ್ನು ಫಡಾ ಸೇರಲು ಬಿಟ್ಟು ಕೊಟ್ಟರು. ಆಗ ಹಣವಂತರು ಆ ಭೂಮಿಗಳನ್ನೆಲ್ಲಾ ವಶಪಡಿಸಿಕೊಂಡರು. ಅನಂತರ ಆ ಭೂಮಿಗಳೆಲ್ಲ ಕೈಯಿಂದ ಕೈಗೆ ದಾಟಿಹೋಗುತ್ತಾ ಅವು ರೈತರ ಖಾತೆಯಿಂದ ವಜಾ ಆಗಿ ಅವರಿಗೆ ಕೇವಲ ಉಳುವಂಥ ಭೂಮಿಗಳಾಗಿ ಉಳಿದುಕೊಂಡು ಬಂದಿರುತ್ತವೆ. ಹೀಗೆಲ್ಲಾ ಆಗಿ ಈ ದಿವಸ ರೈತರ ಸ್ಥಿತಿ ಬಹಳ ಉತ್ಕಟ ಪರಿಸ್ಥಿತಿಗೆ ಬಂದು ನಿಂತಿದೆ. ಇಲ್ಲಿಯವರೆಗೂ ಈ ರೈತರ ವಿಚಾರದಲ್ಲಿ ಈ ಹಣದ ಬೆಲೆಯು ಕೇವಲ ವ್ಯವಹಾರದಲ್ಲಿ ಬಾಯಿಮಾತಿನಲ್ಲಿ ನಿಂತಿದೆಯೇ ಹೊರತು ಯಾವ ಒಂದು ದಾಖಲೆಯ ಮೇಲೂ ನಿಂತಿರುವುದಿಲ್ಲ. ಈ ಗೇಣಿ-ಗುತ್ತಿಗೆ ಕೊಡತಕ್ಕವರ ವಿಚಾರದಲ್ಲಿ ಇಲ್ಲಿಯವರೆಗೂ ಯಾವ ಜಮೀನಿನ ಮಾಲೀಕರೂ ಅವರಿಗೆ ಕಾಗದ ಪತ್ರದ ಮೂಲಕ ರಶೀದಿ ಪುರಾವೆ ಇತ್ಯಾದಿಗಳಾವುದನ್ನೂ ಕೊಟ್ಟಿಲ್ಲ, ಕೊಡುತ್ತಲೂ ಇಲ್ಲ. ಹೀಗೆ ದಾಖಲೆಗಳನ್ನು ರೈತರಿಗೆ ಕೊಡತಕ್ಕದ್ದು ಜಮೀನ್ ಮಾಲೀಕರಿಗೊಂದು ಅಗೌರವವಾದುದು ಎಂದು ಅವರು ಭಾವಿಸಿರುತ್ತಾರೆ. ಆದರೆ ಹೀಗೆಲ್ಲಾ ಆಗಿ ಗೇಣಿ ರೈತನಿಗೆ ದೊರೆಯಬೇಕಾದ ರಕ್ಷಣೆಗಳೊಂದೂ ದೊರೆಯಲಿಲ್ಲ. ಈ ಕಾನೂನುಗಳಾದರೂ ಇಲ್ಲಿಗೆ 10-15 ವರ್ಷಗಳಿಗೆ ಹಿಂದೆಯೇ ಬರಬೇಕಾಗಿತ್ತು. ಯಾವಾಗ ಹೀಗೆ ಗೇಣೀದಾರರ ವಿಚಾರದಲ್ಲಿ ಅತ್ತ ಜಮೀನ್ ಮಾಲೀಕರುಗಳೂ ಇತ್ತ ಸರ್ಕಾರವೂ ತಾತ್ಸಾರ ಭಾವನೆಯನ್ನೇ ತೋರಿಸುತ್ತಾ ಬರಲು ಅವಕಾಶವಾಯಿತೋ ಆಗ ಆ ಗೇಣೀದಾರರಲ್ಲಿ ಒಂದು ಜಾಗೃತಿ, ಹಾಗೂ ಸಂಘಟನಾಶಕ್ತಿ ಹುಟ್ಟಲು ಅವಕಾಶವಾಯಿತು. ಆಗ ಸರ್ಕಾರದವರಿಗೆ ಈ ಗೇಣೀ ರೈತರುಗಳ ಇಷ್ಟವನ್ನು ಈಡೇರಿಸದಿದ್ದರೆ ಇನ್ನು ಸಾಧ್ಯವೇ ಇಲ್ಲವೆನ್ನತಕ್ಕ ಸಂದರ್ಭ ಒದಗಿದ್ದರಿಂದ ಆಗ ಇವರು ಈ ಶಾಸನ ಸಭೆಯ ಮುಂದೆ ಈ ರೀತಿಯ ಕೆಲಕೆಲವು ಮಸೂದೆಗಳನ್ನು ತರಲು ಪ್ರಾರಂಭ ಮಾಡಿದರು. ಆದರೆ ಈಗಾಗಲೇ ಈ ತೆರನಾದ ಮಸೂದೆಗಳನ್ನು ಬೊಂಬಾಯಿ, ಮದರಾಸ್ ಮತ್ತು ಹೈದರಾಬಾದ್ ರಾಜ್ಯಗಳಲ್ಲಿ ತಂದು ಶಾಸನಗಳನ್ನಾಗಿ ಮಾಡಿ ಜಾರಿಗೆ ಕೊಟ್ಟಿದ್ದಾರೆ. ಆದರೆ ಇಲ್ಲಿ ಇನ್ನೂ ಆಗುತ್ತಲೇ ಇದೆ. ಹೀಗೆ ಇಲ್ಲಿ ಇಷ್ಟೊಂದು ನಿಧಾನವಾಗಿರುವಾಗ ಈ ಕಾನೂನುಗಳು ಜಾರಿಗೆ ಬಂದರೂ ಸಹ ಗೇಣೀದಾರರು ಮುಂದುವರಿಯಲು ಅವಕಾಶವಿದೆಯೇ? ಹಾಗೆ ಅವರಿಗೆ ಮುಂದುವರಿಯಲು ಸಾಧ್ಯವಿದೆಯೇ? ಎಂದು ಕೇಳುತ್ತೇನೆ ಆದರೆ ಈ ದಿವಸ ಏನು ಪರಿಸ್ಥಿತಿಯಿದೆ ಎಂಬುದನ್ನು ನೋಡಿದರೆ ಆ ಗೇಣೀದಾರನಿಗೂ ಮತ್ತು ಗುತ್ತಿಗೆದಾರನಿಗೂ ಆ ಗೇಣೀ-ಗುತ್ತಿಗೆಗಳು ಸರಿಯಾಗಿ ಹೋಗದೆ ಇರತಕ್ಕಂಥ ಪರಿಸ್ಥಿತಿ ಹುಟ್ಟುತ್ತಿದೆ. ಕೊನೆಗೆ ಇದು ಇಂದಲ್ಲ ನಾಳೆ ಸಂಪೂರ್ಣವಾಗಿ ಮುರಿದುಬೀಳುವುದಕ್ಕೂ ಸಹ ಪ್ರಾರಂಭವಾಗಬಹುದು. ಈ ಬಗ್ಗೆ ಒಂದೆರಡು ಉದಾಹರಣೆಗಳನ್ನು ಕೊಟ್ಟು ನಾನು ಸಭೆಗೆ ಸಮಾಧಾನ ಮಾಡಬೇಕೆಂದಿದ್ದೇನೆ. ಈಗ ನಮ್ಮಲ್ಲಿ ಈ ಗೇಣೀದಾರರು ನಾಲ್ಕನೇ ಒಂದು ಭಾಗದ ಬೆಳೆಯನ್ನು ಗೇಣಿಯರೂಪವಾಗಿ ಜಮೀನು ಮಾಲೀಕರಿಗೆ ಸಂದಾಯಮಾಡಬೇಕೆಂದು ವಿಧಾಯಕ ಮಾಡಿದ್ದಾರೆ. ಆದರೆ ಹೀಗೆ ನಿಗದಿ ಮಾಡಿರುವ ನಾಲ್ಕನೇ ಒಂದು ಭಾಗ ಯಾವುದರಲ್ಲಿ ಎಂಬುದನ್ನು ನಿಗದಿ ಮಾಡಬೇಕಾದದ್ದು ಬಹಳ ಪ್ರಾಮುಖ್ಯವಾದ ವಿಷಯ.

Mr. SPEAKER.—You are going beyond the scope of the amending Bill whether it is necessary or not. You may just make a passing reference to other provisions.

ಶ್ರೀ ಎಸ್. ಗೋಪಾಲಗೌಡ.—ಈ ಅಧ್ಯಾಯ ಮೂರನೇ (a)ನಲ್ಲಿ ಗುತ್ತಿಗೆ ವಿಚಾರ ಹೇಳುತ್ತ:— ಪ್ರತಿಯೊಬ್ಬ ಷಿಕ್ಮಿದಾರನೂ ಇನಾಂದಾರನಿಗೆ (ಈ ಅಧ್ಯಾಯದಲ್ಲಿ ಇನ್ನುಮುಂದೆ ಜಮೀನುದಾರನೆಂದು ಪ್ರತಿಪಾದಿಸಲಾಗುವುದು) ಅವನ ಹಿಡುವಳಿಯಲ್ಲಿರುವ ಜಮೀನಿನ ಸಂಬಂಧದಲ್ಲಿ ನ್ಯಾಯವಾದ ಗುತ್ತಿಗೆಯನ್ನು ಕೊಡತಕ್ಕದ್ದು ಎಂಬುದಾಗಿ ಹೇಳಿದೆ.

Mr. SPEAKER.—In the original Bill there was no provision included to confer any right on the tenants-at-will. Therefore this is an amendment to confer tenancy right on them. You can discuss whether it is proper or improper. You cannot discuss all the rights or the wrongs of Tenancy Act here. You can make a passing reference to the provisions. I have no objection to that, but let the Act itself not be the main subject.

ಶ್ರೀ ಎಸ್. ಗೋಪಾಲಗೌಡ.—ಮೈನ್ ಸಬ್-ಜೆಕ್ಟಿನಲ್ಲಿ ಏನೂ ಇಲ್ಲ. ನನ್ನ ಮನಸ್ಸಿನಲ್ಲಿರುವುದು ಇಷ್ಟೆ:—ಆ ಟೆನೆಂಟ್ಸ್‌ಅಟ್‌ವಿಲ್‌ಗೆ ಹೆಚ್ಚಿನ ಹಕ್ಕನ್ನು ಕೊಡಬೇಕೆಂದು ಹೇಳಿರುವುದರ ಬಗ್ಗೆ ನನ್ನ ವಿರೋಧವೇನೂ ಇಲ್ಲ. ಆ ರೀತಿಯಾಗಿ ನಾನು ನನ್ನ ಸ್ವಪ್ನದಲ್ಲಿ ಸಹ ವಿರೋಧಮಾಡುತ್ತೇನೆಂದು ತಾವುಗಳಾರೂ ಭಾವಿಸಬಾರದು. ಅವರ ಹಿತರಕ್ಷಣೆಗಳ ಬಗ್ಗೆ ನನ್ನ ಬೆಂಬಲ ಯಾವಾಗ್ಲೂ ಇದ್ದೇ ಇರುತ್ತದೆ. ಅದನ್ನು ನಾನು ಎಂದೂ ಮರೆತು ಮಾತನಾಡತಕ್ಕವನಲ್ಲ.

(ಶ್ರೀ ಎಸ್. ಗೋಪಾಲಗೌಡ.)

ಆದರೆ ಇವುಗಳೊಂದೂ ಕಾರ್ಯತಃ ನಡೆಯುತ್ತಿಲ್ಲವೆಂಬುದಕ್ಕಾಗಿ ನಾನು ಇಷ್ಟೆಲ್ಲವನ್ನೂ ಹೇಳಬೇಕಾಗಿದೆ. ಇದಕ್ಕೆಲ್ಲಾ ಉದಾಹರಣೆಗಳನ್ನು ಕೊಟ್ಟು ಹೇಳುತ್ತೇನೆ. ನಮ್ಮ ಸರ್ಕಾರ ಈವರೆಗಾದರೂ ಆ ಗುತ್ತಿಗೆಯೆಂಬುದು ಏನೆಂಬುದನ್ನಾಗಲಿ, ಎಷ್ಟಿರಬೇಕೆಂಬುದನ್ನಾಗಲಿ ಖಚಿತವಾಗಿ ಗೊತ್ತುಮಾಡಿಲ್ಲ. ಅಂಥ ಯಾವ ಒಂದು ಗೊತ್ತುಮಾಡುವ ನಿಯಂತ್ರಣವನ್ನೂ ರಚಿಸಿಲ್ಲ.

Mr. SPEAKER.—You have got the right to bring an amendment to that particular clause and the House will debate on it. I have absolutely no objection.

ಶ್ರೀ ಎಸ್. ಗೋಪಾಲಗೌಡ.—ಹಾಗಾದರೆ ಇದನ್ನು ಪರಿಶೀಲನೆ ಮಾಡತಕ್ಕ ಕಾಲದಲ್ಲಿ ನಾನು ಯಾವ ವಿಷಯ ಮಾತನಾಡಬೇಕು, ಯಾವುದನ್ನು ಮಾತನಾಡಬಾರದು ಎಂಬುದನ್ನಾದರೂ ತಾವು ಹೇಳಿಬಿಡಿ.

ಅಧ್ಯಕ್ಷರು.—ಈಗ ತಾವು ಸಭೆಯ ಮುಂದೆ ಬಂದಿರತಕ್ಕ ಬಿಲ್ಲಿನ ಬಗ್ಗೆ ಏನಾದರೂ ತಿದ್ದುಪಡಿ ಮಾಡುವುದಿದ್ದರೆ ಇಲ್ಲವೇ ಬದಲಾವಣೆ ಮಾಡತಕ್ಕ ವಿಚಾರಗಳಿದ್ದರೆ ಅಂಥದ್ದನ್ನು ಮಾತ್ರ ತಿಳಿಸಿದರೆ ಸಾಕು.

ಶ್ರೀ ಎಸ್. ಗೋಪಾಲಗೌಡ.—ಈ ಬಿಲ್ಲಿನಲ್ಲಿ ಹೇಳಿರತಕ್ಕ ಅನೇಕ ಕ್ಲಾಜುಗಳನ್ನು ತಿದ್ದುಪಡಿ ಮಾಡಬೇಕಾಗಿದೆ. ಈ ದಿವಸ ನಾವು ಮಾಡಲು ಹೊರಟಿರತಕ್ಕ ಕಾನೂನು ಬಹಳ ನಿಧಾನವಾಗಿದೆ. ಈ ಬಿಲ್ಲು ಕನಿಷ್ಠಪಕ್ಷ ಇಲ್ಲಿಗೆ ಎಂಟು—ಹತ್ತು ವರ್ಷಗಳ ಹಿಂದೆಯೇ ಬರಬೇಕಾಗಿತು. ಆ ಗೇಣೀದಾರರ ದುರದೃಷ್ಟದಿಂದ ಇದು ಬಾರದೆ ಹೋಯಿತು. ಆದರೆ ನಾವುಗಳೆಲ್ಲಾ ಈ ಸಭೆಗೆ ಬಂದಾಗಲೇ ಐದು ವರ್ಷಗಳಾಗುತ್ತ ಬಂತು. ಈ ಐದು ವರ್ಷಗಳಿಂದಲೂ ಇದು ಜಾರಿಗೆ ಬರುವುದರಲ್ಲೇ ಇದೆ. ಚರ್ಚೆಗಳನ್ನೇನೋ ವಿಶೇಷವಾಗಿ ಮಾಡಿದ್ದಾಯಿತು. ಆದರೆ ನಮ್ಮ ಸರ್ಕಾರಕ್ಕೆ ಇದುವರೆಗೂ ರೂಲ್ಸುಗಳನ್ನು ಫ್ರೇಂ ಮಾಡುವುದಕ್ಕಾಗಲಿಲ್ಲ. ಹೀಗೆ ಒಂದು ಕಾನೂನನ್ನು ಮಾಡುವುದಕ್ಕೆ ಮೊದಲೇ ಅದಕ್ಕೊಂದು ತಿದ್ದುಪಡಿಯನ್ನು ತರುವುದಕ್ಕೆ ಈ ಸರ್ಕಾರಕ್ಕೆ ಮಾನವೇನಾದರೂ ಇದೆಯೇ ? ಇಂಥ ಮಾನ್ಯ ಸಭೆಯ ಮುಂದೆ ಏನಾದರೂ ಒಂದು ವಿಚಾರ ತರಬೇಕಾಗಿದ್ದರೆ ಅದಕ್ಕೆ ಗೌರವವಿರಬೇಕು. ಇಲ್ಲಿ ಕುಳಿತು ಕೆಲಸ ಮಾಡತಕ್ಕವರಿಗಾದರೂ ಒಂದು ಮಾನ—ಮರ್ಯಾದೆಯಿರಬೇಕು. ಇಲ್ಲಿಗೆ ಯಾರೂ ತಮಾಷೆ ಮಾಡುವುದಕ್ಕಾಗಿ ಬಂದಿಲ್ಲ. ಹಾಗೆ ಯಾರೂ ತಮಾಷೆಗಾಗಿ ಕಾನೂನುಗಳನ್ನು ತರುತ್ತಿಲ್ಲ. ನಾವು ಇಲ್ಲಿ ಏನೇ ಕೆಲಸ ನಡೆಸಲಿ ಅದಕ್ಕೆ ಒಂದು ಗುರಿಯಿರಬೇಕು—ನಮ್ಮ ಪ್ರಯತ್ನಗಳೆಲ್ಲಾ ಆ ಗುರಿಯನ್ನು ಸಾಧನೆ ಮಾಡತಕ್ಕ ಮಾರ್ಗದಲ್ಲಿ ಮುಂದುವರಿಯುತ್ತಿರಬೇಕು. ಹಾಗಿಲ್ಲದೆ ಪ್ರತಿವರ್ಷವೂ ಒಂದೊಂದು ಬಿಲ್ಲನ್ನು ತಂದು ನಮ್ಮ ಉದ್ದೇಶವನ್ನು ಹೀಗೆಲ್ಲಾ ಚೂರು ಚೂರು ಮಾಡುತ್ತಿರುವುದಕ್ಕಾಗಿ ಸರ್ಕಾರಕ್ಕೆ ನಾಚಿಕೆ ಆಗುವುದಿಲ್ಲವೇ? ಆದರೆ ಈಗ ಭಾರತ ಸರ್ಕಾರದವರು ಈ ಪರಂಪರಾಗತವಾದ ಷಿಕ್ಮಿಯ ಹಕ್ಕುಗಳನ್ನು ವಹಿಸಿಕೊಡಲು ಕಾನೂನಿನ ಅವಕಾಶವನ್ನು ಕಲ್ಪಿಸಬೇಕೆಂಬುದಾಗಿ ಸಲಹೆ ಮಾಡಿದ್ದಾರೆಂದೂ—ಅದಕ್ಕಾಗಿ ಇದನ್ನು ತಂದಿದ್ದೇವೆಂದೂ ಹೇಳಿರುತ್ತಾರೆ. ಈಗ ನಮ್ಮನ್ನು ಏಕೆ ಕೇಳುತ್ತಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಷ್ಟೊಂದು ಬುದ್ಧಿವಂತರಾದ ಈ ಮಹನೀಯರು ಈ ಹಿಂದೆಯೇ ಇದರ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದರೆ ಚೆನ್ನಾಗಿತ್ತು. ಇವರೇಕೆ ತರಲಿಲ್ಲ?

ಶ್ರೀ ಎಸ್. ಗೋಪಾಲಗೌಡ.—ಬೀಸುವ ದೊಣ್ಣೆಗೆ ತಲೆ ತಪ್ಪಿಸಿಕೊಂಡರೆ ಸಾಕೆಂಬುದಾಗಿ ತಾವು ಇದನ್ನು ತಂದಿರುವಹಾಗೆ ಕಾಣುತ್ತಿದೆ. ಹೀಗೆ ತಾವು ಈವರೆಗೂ ಈ ಮಸೂದೆಯನ್ನು ತಾರದೆ ಹೋದುದರಿಂದ ಅನೇಕ ಸಣ್ಣ ಪುಟ್ಟ ರೈತರುಗಳು ತಮ್ಮ ಮನೆ ಮಠಗಳನ್ನೆಲ್ಲಾ ಕಳೆದುಕೊಂಡಿದ್ದಾರೆ. ಅವರಿಗೆ ಆ ಲುಕ್ಸಾನನ್ನೆಲ್ಲಾ ಈಗ ಯಾರು ಕಟ್ಟಿಕೊಡುತ್ತಾರೆ? ಇಂಥ ಲುಕ್ಸಾನನ್ನು ಕಟ್ಟಿಕೊಡುವಂಥ ಕಾನೂನನ್ನು ತಾವು ತಂದಿಲ್ಲ. ತಾವು ತರತಕ್ಕ ಮಸೂದೆಗಳಿಗೆ ತಲೆಯಿಲ್ಲ, ಬುಡವಿಲ್ಲ. ಈಗ ತಾವು ತಂದಿರತಕ್ಕ ಮಸೂದೆಯಿಂದ ಅವರಿಗೆ ಯಾವ ಒಂದು ಪರಿಹಾರವನ್ನೂ ಒದಗಿಸುವುದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಈಗ $\frac{1}{4}$ ಭಾಗದಷ್ಟು ಗುತ್ತಿಗೆ ಕೊಡಬೇಕೆಂದು ನಿಗದಿಮಾಡಿದ್ದಾರೆ. ಇದನ್ನು ಇಲ್ಲಿಯವರೆಗಾದರೂ ಖಚಿತವಾಗಿ ಯಾರು ನಿರ್ಧರ ಮಾಡಿದ್ದಾರೆ? ಇದೇನು ಆಗತಕ್ಕ ಬೆಳೆಯಲ್ಲೋ ಅಥವಾ ಜಮೀನಿನ ವಿಸ್ತೀರ್ಣಕ್ಕನುಸಾರವಾಗಿಯೋ? ಹೀಗೆ ಒಂದು ಖಚಿತವಾದ ತೀರ್ಮಾನವಿಲ್ಲದಿರುವುದರಿಂದ ಆ ಬಡಪಾಯಿ ಗೇಣೀಕುಳಗಳು ಕೋರ್ಟಿಗೆ ಹೋಗಿ ಅಲೆಯಬೇಕಾಗಿರುತ್ತದೆ. ಗೇಣಿ ಕೊಡತಕ್ಕ ರೈತ 20 ಮಣ ಅಡಿಕೆಯಾಗಿದೆ ಎಂದು ಹೇಳಿದರೆ ಜಮೀನಿನ ಮಾಲೀಕ ಇಲ್ಲ ನನ್ನ ತೋಟದಲ್ಲಿ 50 ಮಣವಾಗಿದೆ ಎಂದು ಹೇಳುತ್ತಿದ್ದಾನೆ. ಆಗ ಈ ವಿವಾದವನ್ನು ತೀರ್ಮಾನ ಮಾಡಿಕೊಳ್ಳಲು ಅಮಲ್ದಾರರ ಮುಂದೆ ಹೋಗಲೇಬೇಕಾಗುತ್ತದೆ. ಹಾಗೆ ಎಷ್ಟೋವೇಳೆ ಕೋರ್ಟಿಗೆ ತಿರುಗಬೇಕಾಗುತ್ತದೆ. ಈ ಕಷ್ಟಗಳನ್ನೆಲ್ಲಾ ಅವರು ಯಾರಲ್ಲಿ ಹೇಳಬೇಕು! ಹೀಗೆ ಇದು ಊರ್ಜಿತವಾಗಲು ಸಾಧ್ಯವೇ? ನಾನು ಈವರೆಗೂ ಇವರ ಪರವಾಗಿ ಹೋರಾಟ ನಡೆಸುತ್ತಿದ್ದೆನು. ಆದರೆ ಏನೂ ಸುಖವಾಗಲಿಲ್ಲ. ಆದುದರಿಂದ ನಾನಿನ್ನು ಮುಂದೆ ಈ ವಿಚಾರವಾಗಿ ಯಾವ ಹೋರಾಟವನ್ನೂ ಮಾಡುವುದಕ್ಕೆ ತಯಾರಿಲ್ಲ. ತಾವು ಈ ಒಂದು ಮಸೂದೆಯನ್ನು ತಂದು ಆ ಗೇಣೀದಾರರನ್ನು ಶಾಶ್ವತವಾದ ಗೇಣೀದಾರರೆಂದು ಕರೆದರೇನು? ಅಥವಾ ಅಶಾಶ್ವತವಾದಂಥ ಗೇಣೀದಾರರೆಂದು ಕರೆದರೇನಾಗುತ್ತದೆ? ಈಗ ತಾವು ಈ ಮಸೂದೆಯನ್ನು ಕಾಲ ಮೀರಿ ತರುತ್ತಿದ್ದೀರಿ. ಆ ಕಾಲದಲ್ಲಿ ನಾವು ಇದಕ್ಕೆ ತಿದ್ದುಪಡಿ ಮಾಡುತ್ತಿದ್ದೇವೆ. ಈಗೇನೋ ಆ ಭಾರತ ಸರ್ಕಾರ ಆದೇಶ ಕೊಟ್ಟಿದ್ದಾರೆಂದು ತಾವು ಇದನ್ನು ತಂದಿರುತ್ತೀರಿ. ಅದಕ್ಕಾಗಿ ನೀವೆಲ್ಲರೂ ಈಗ ಬೆಂಬಲ ನೀಡಿ ಎಂದು ಕೇಳುತ್ತಿದ್ದೀರಿ. ನೀವು ಮಾತೆತ್ತಿದರೆ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ—ಸರ್ವೋದಯ ಎಂಬುದಾಗಿ ದೊಡ್ಡ ದೊಡ್ಡ ಪದಗಳನ್ನು ಉಪಯೋಗಿಸುತ್ತ ಭೂಮಿ ಉಳತಕ್ಕ ರೈತನಿಗೆ ಈವರೆಗೂ ಭೂಮಿಯನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಈಗಲಾದರೂ ತಾವು ತಮ್ಮ ಹೇಳಿಕೆಗನುಸಾರವಾಗಿ ಭೂಮಿ ಉಳುವ ಪ್ರತಿಯೊಬ್ಬ ರೈತನಿಗೂ ಆತನ ಸಂಸಾರಕ್ಕೆ ಬೇಕಾಗುವಷ್ಟನ್ನು ಎಂದರೆ ಒಂದು ಆರ್ಥಿಕ ಮಟ್ಟಕ್ಕೆ ಅನುಕೂಲಪಡಿಸುವ ರೀತಿಯಲ್ಲಿ ಐದು—ಹತ್ತು ಎಕರೆಗಳನ್ನು ಒಂದು ಕ್ರಮವರಿತು ಎಲ್ಲರಿಗೂ ಸರಿಸಮಾನವಾಗಿ ಹಂಚಿಕೆ ಮಾಡಿ ಕೊಡಿ. ಗೇಣಿಯನ್ನು ಖಚಿತವಾಗಿ ಗೊತ್ತು ಮಾಡಿ. ಈಗ ರೈತನು 20 ಮಣ ಎಂದರೆ ಭೂಮಿಯ

ಮಾಲೀಕ 30 ಮಣ ಎಂದು ಹೇಳುತ್ತಾನೆ; ಇಲ್ಲವೇ ರೈತರು 10 ಪಲ್ಲ ಎಂದರೆ ಜಮೀನು ಮಾಲೀಕ 15 ಪಲ್ಲ ಎಂದು ಹೇಳುತ್ತಾನೆ. ಇದನ್ನೆಲ್ಲಾ ತಪ್ಪಿಸಬೇಕು. ನಿಮಗೆ ಇಷ್ಟಬಂದರೆ ನೀವೇ ಆ ಗೇಣಿಯನ್ನು ಅವರಿಗೆ ಪಾವತಿ ಮಾಡಿ. ಭೂಮಿ ಉಳತಕ್ಕವನಿಗೆ ಭೂಮಿ ಬೇಕೇಬೇಕು. ಆತನು ಪ್ರತಿದಿವಸವೂ ಕೋರ್ಟಿಗೆ ತಿರುಗುವಂತೆ ಮಾತ್ರ ಮಾಡಬೇಡಿ. ಆತನಲ್ಲಿ, ಕೋರ್ಟಿಗೆ ಹೋಗಿ, ತನ್ನಂತೆ ಕೇಸನ್ನು ಗೆದ್ದುಕೊಂಡು ಬರಲು ಯಾವ ಪುರಾವೆಯಾಗಲಿ ಅಥವಾ ದಾಖಲೆಗಳಾಗಲಿ ಇರುವುದಿಲ್ಲ. ಈತನು ಸ್ವಾಭಾವಿಕವಾಗಿ ಬಡವನಾದುದರಿಂಲೂ, ಜಮೀನ್ ಮಾಲಿಕರು ಧನಿಕರಾಗಿರುವುದರಿಂದಲೂ, ಯಾರು ಬಡವರಿಗೆ ಬಂದು ಸಾಕ್ಷಿ ಸಾಹಿತ್ಯ ಇತ್ಯಾದಿಗಳನ್ನು ಹೇಳುವುದು ಬಹಳ ಕಷ್ಟ. ಹೀಗೆಲ್ಲಾ ಇರುವುದರಿಂದ ಗೇಣಿದಾರನು ತನ್ನ ನ್ಯಾಯವಾದ ಹಕ್ಕನ್ನು ತಾನು ಉಳಿಸಿಕೊಂಡು ಬರಲು ಖಂಡಿತ ಸಾಧ್ಯವೇ ಇಲ್ಲ. ಈ ದಿವಸ ತಾವು ಈ ಬಿಲ್ಲಿಗೆ ತಂದಿರತಕ್ಕ ತಿದ್ದುಪಡಿಯಿಂದ ಗೇಣೀದಾರರಿಗೆ ಏನೂ ಪ್ರಯೋಜನವಿಲ್ಲ; ಉಪಕಾರವೂ ಇಲ್ಲ. ಹಾಗೊಂದು ವೇಳೆ ಏನಾದರೂ ಉಪಕಾರವಾಗುವುದಾದರೆ ಅದು ಆ ಇನಾಂದಾರರುಗಳಿಗೆ ಆಗಬಹುದು. ಈಗಾಗಲೇ ಅವರು ಈ ಮಸೂದೆಯನ್ನು ತರುವುದರ ಬಗ್ಗೆ ವಿಳಂಬ ಮಾಡತಕ್ಕ ಭಾಗದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಸರ್ಕಾರದವರಿಗೂ ಅಲಕ್ಷ್ಯ. ಆದರೆ ಇವರಿಗೆ ಸಾಮರ್ಥ್ಯವಿರಲಿಲ್ಲ ಎಂದರೆ ನಾನು ಅದನ್ನು ಒಪ್ಪುವುದಿಲ್ಲ.

ಪ್ರಭಾವಕ್ಕೊಳಗಾಗಿ ತನ್ನ ಕೈಯಲ್ಲಾಗದೆ, ತನ್ನ ಸೋಲನ್ನೊಪ್ಪಿಕೊಂಡಿದೆ, ಈ ಮಸೂದೆಗಳ ವಿಷಯದಲ್ಲಿ ಎಂದು ಸ್ಪಷ್ಟವಾಗಿ ನಾವು ಸರ್ಕಾರದ ಮುಖಕ್ಕೇನೇ ಹೇಳಬಹುದು. ಹಾಗೇನೂ ಆಗಲಿಲ್ಲ ಎಂದು ಹೇಳುವುದಕ್ಕೆ ಅವರಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ತಂದು ಈಗ ಕಾಲವಿಳಂಬ ಮಾಡುತ್ತಾಯಿರುವುದು ನನಗಂತೂ ಬಹಳ ವಿಷಾದದ ವಿಷಯ. ಇದೇ ಸರ್ಕಾರ ಈ ಸಂದರ್ಭದಲ್ಲಿ ಯೋಚನೆ ಮಾಡಬೇಕು: ಜಮೀನು ಯಾರು ಯಾರು ಉಳುಮೆ ಮಾಡುತ್ತಾ ಇದ್ದಾರೆ, ಅವರಲ್ಲಿ ಯಾರು ಯಾರಿಗೆ ಆರ್ಥಿಕ ಹಿಡುವಳಿ ಎಷ್ಟೆಷ್ಟಿರಬೇಕು, ಸಂಸಾರಕ್ಕೆ ಆಗತಕ್ಕ ಐದು ಎಕರೆ ತರಿ ಅಥವಾ 10 ಎಕರೆ ತರಿ, ಬೇರೆ ಬೇರೆ ಭಾಗಗಳಲ್ಲಿ ಆಗತಕ್ಕ ಬೆಳೆಗನು ಸಾರವಾಗಿ ಮತ್ತು ಅವನ ಸಂಸಾರವನ್ನು ಐದು ಜನರ ಒಂದು ಯೂನಿಟ್ಟಾಗಿ ಇಟ್ಟುಕೊಂಡು ಅದಕ್ಕೆ ಎಷ್ಟು ಎಕರೆ ಜಮೀನು ಬೇಕು, ಎಷ್ಟು ತೋಟ ಬೇಕು, ಎಷ್ಟು ಖುಷ್ಕೀ ಜಮೀನು ಬೇಕು ಎಂಬುದನ್ನು ಯೋಚನೆ ಮಾಡಿ ಆ ಪ್ರಕಾರ ಆರ್ಥಿಕ ಹಿಡುವಳಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕಾದದ್ದು ಇವತ್ತಿನ ಬಹಳ ಅಗತ್ಯವಾದ ಒಂದು ಕೆಲಸ ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ಸರ್ಕಾರದವರು ಈ ರೀತಿ ನಿರ್ಣಯಮಾಡಿ, ಇಲ್ಲಿ ನಿರ್ಣಯ ಮಾಡಿರತಕ್ಕ ಗುತ್ತಿಗೆಯನ್ನೇ ತೆಗೆದುಕೊಳ್ಳತಕ್ಕದ್ದು ಎಂದು ಹೇಳಿದಮಾತ್ರಕ್ಕೇ ಸರ್ಕಾರದ ಜವಾಬ್ದಾರಿ ಇವೊತ್ತಿಗೆ ಮುಗಿಯಲಿಲ್ಲ. ಇವೊತ್ತು ಇದನ್ನು ಹೇಳಿದ್ದಲ್ಲ, ಹೇಳಿ ಬಹಳ ದಿವಸ ಆಗಿದೆ. ಆದರೆ ಈ ಕಾನೂನಿಗೆ ಯಾರೂ ಮರ್ಯಾದೆ ಕೊಟ್ಟಿಲ್ಲ, ಗೇಣಿ ಮಾಡತಕ್ಕವನಿಗೆ ಜಮೀನ್ ದಾರರೂ ಯಾರೂ ಬರೆದುಕೊಟ್ಟಿಲ್ಲ, ಯಾವ ರಶೀದಿಯೂ ಅವರ ಹತ್ತಿರ ಇಲ್ಲ. ನಾಲ್ಕು ಸೇರಿನ ಕೊಳಗದಲ್ಲೇ ಅಳೆಸುತ್ತಾ ಇದ್ದಾರೆ. ಈ ಸರ್ಕಾರ ಏನೂ ಗೊತ್ತಿಲ್ಲ ಎಂದು ಕಣ್ಣುಮುಚ್ಚಿಕೊಂಡು ಕುಳಿತಿದೆ; ಮತ್ತು ಈ ಪದ್ಧತಿಯನ್ನು ಮಾರ್ಪಾಡು ಮಾಡುವ ಶಕ್ತಿಯನ್ನು ಈ ಸರ್ಕಾರ ಪಡೆದಿಲ್ಲ. ಕಾನೂನು ಇದೆ, ಆದರೆ ಉಪಯೋಗ ಪಡೆಯುವುದಕ್ಕೆ ಕೋರ್ಟಿಗೆ ಹೋಗಿ ಎನ್ನುತ್ತಾರೆಯೇ ಹೊರತು, ಆ ಕಾನೂನನ್ನು ಕಾರ್ಯಗತ ಮಾಡುವುದಕ್ಕೆ ಒಂದು ಯಂತ್ರವನ್ನು ರಚಿಸಲು ಸರ್ಕಾರ ಸಿದ್ಧವಾಗಿಲ್ಲ. ಆದ್ದರಿಂದ ಈ ತಿದ್ದುಪಡಿ ಕಾನೂನು ಆದರೂ ಇದರಿಂದ ಆಗತಕ್ಕ ಭವಿಷ್ಯ ಇಷ್ಟೇ, ಪುಸ್ತಕದಲ್ಲಿ ಇರುತ್ತದೆ. ಯಾರು ಯಾರು ಹಕ್ಕುದಾರರು, ಯಾರುಯಾರಿಗೆ ಜಮೀನು ಸೇರಬೇಕು ಎಂಬುದನ್ನು ಪರಿಶೀಲನೆಮಾಡಿ ಹಂಚುತ್ತಾರೆ ಎನ್ನುವ ಭರವಸೆ ಇಲ್ಲ. ಏಕೆಂದರೆ ಸಾಮಾನ್ಯವಾಗಿ ನಮ್ಮ ಹೊಟ್ಟೆಯಲ್ಲಿರುವ ದುಃಖವನ್ನು ಅಥವಾ ಕಳವಳವನ್ನು ವ್ಯಕ್ತಪಡಿಸುವುದಕ್ಕೆ ಇದು ಒಂದು ಮಾರ್ಗ ಅಷ್ಟೆ. ಅದಕ್ಕಿಂತ ಹೆಚ್ಚಿನ ಆಸೆಯನ್ನು ಈ ಸರ್ಕಾರದಲ್ಲಿ ಇಟ್ಟುಕೊಂಡಿಲ್ಲ. ಒಂದುವೇಳೆ ಅವರು ಹೇಳಿದಂತೆ ನಡೆದುಕೊಳ್ಳುವುದಕ್ಕೆ ಮುಂದಾದರೂ ಅವರಿಗೆ ಶಕ್ತಿ ಬಂದರೆ ರೈತರಿಗೆ ಭೂಮಿಯನ್ನು ಕೊಡುವ ಈ ಕಾರ್ಯಕ್ರಮವನ್ನಿಟ್ಟುಕೊಳ್ಳುವುದು ಒಳ್ಳೆಯದು. ಏಕೆಂದರೆ ಗುತ್ತಿಗೆಯನ್ನು ನಿಷ್ಕರ್ಷೆಮಾಡಿ, ಗುತ್ತಿಗೆ ಹಂಚಿಕೆಯನ್ನು ಏರ್ಪಡಿಸುವುದಕ್ಕೆ ಸಾಧ್ಯವೇ ಇಲ್ಲ. ಅದು ಅಸಾಧ್ಯವಾದ ಮಾತು. ಅಡಿಕೆಯನ್ನು ರೇಖೆ ಮಾಡಿ, ತೂಕ ಮಾಡಿ ಕೊಡುವುದಕ್ಕೆ ಸಾಧ್ಯವೇ? ಇಲ್ಲ. 10 ರೂಪಾಯಿ ಕಂದಾಯ ಇದ್ದರೆ ಅದರ ಎರಡರಷ್ಟು ಮೂರರಷ್ಟು ಎಂದು ಇರಬಹುದು. ಅದು ಒಂದೊಂದು ಕಡೆ ಒಂದಕ್ಕೆ 10 ರಷ್ಟು ಆಗುತ್ತದೆ. ಒಬ್ಬ ಮನುಷ್ಯ 100 ರೂಪಾಯಿ ಕೊಡಬೇಕು, ಇನ್ನೊಬ್ಬ 10 ರೂಪಾಯಿ ಕೊಡಬೇಕು ಎಂದರೆ ಅದು ಸಮಾಜದ ಆರ್ಥಿಕ ಪರಿಸ್ಥಿತಿಗೆ ಹೊಂದಿಕೊಳ್ಳುವುದಿಲ್ಲ. ಎರಡು ಸಂಸಾರ ಪೋಷಣೆ ಮಾಡತಕ್ಕ ಜವಾಬ್ದಾರಿ ಗೇಣಿದಾರನಮೇಲೆ ಇರುತ್ತದೆ. ತಾನು ತನ್ನಹೆಂಡಿರು ಮಕ್ಕಳನ್ನು ಕಟ್ಟಿಕೊಂಡು, ಅದರ ಮೇಲೆ ಜಮೀನ್ ದಾರನ ಸಂಸಾರದ ಹೊರೆಯನ್ನು ಹೊರಬೇಕು ಆ ಪಾಪಿ! ಹಿಂದಿನಿಂದ ಯಾವುದೋ ಒಂದು ಪದ್ಧತಿ ಬಂದಿದೆ ಅಂದಮಾತ್ರಕ್ಕೆ ಈರೀತಿ ಅವನ ಮೇಲೆ ಹೊರೆ ಹೊರಿಸುವುದು ನ್ಯಾಯವಲ್ಲ. ಈ ಪದ್ಧತಿಯನ್ನು ತಕ್ಷಣ ತೆಗೆದು ಹಾಕುವುದಕ್ಕೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಬದಲಾಗಿ ಈ ರೀತಿ ಚೌಕಾಸಿ ಮಾಡತಕ್ಕ ತಿದ್ದುಪಡಿ ಕಾನೂನುಗಳನ್ನು ತರುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಎನ್ನುವುದನ್ನು ಮಾತ್ರ ಈ ಸಲ ಖಚಿತವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಗುತ್ತಿಗೆಗೆ ಸಂಬಂಧಪಟ್ಟ ಪ್ರಕರಣದಲ್ಲಿ—III ಅಧ್ಯಾಯದಲ್ಲಿ-ಟೆನೆನ್ಸಿ ಆಕ್ಟ್‌ನಲ್ಲಿ ಯಾವ ರೀತಿ ವಿಧಾಯಕವಾಗಿದೆಯೋ ಆ ರೀತಿ ಗುತ್ತಿಗೆಯನ್ನು ನಿರ್ಧರಿಸಬೇಕು ಎಂಬ ಅರ್ಥ ವಿವರಣೆ ಕೊಟ್ಟಿದ್ದಾರೆ. ಈಗ ಟೆನೆನ್ಸಿ ಆಕ್ಟ್‌ನಲ್ಲಿ ಒಂದೊಂದು ಊರಿಗೆ ಒಂದೊಂದು ರೀತಿಯಲ್ಲಿ ಗುತ್ತಿಗೆ ಏರ್ಪಾಡು ಮಾಡಿ ಒಂದು ಕಡೆ $\frac{1}{3}$ ಭಾಗ ಒಂದು ಕಡೆ $\frac{1}{4}$ ಭಾಗ ಎನ್ನುತ್ತಾರೆ. ಮಲೆನಾಡಿನಲ್ಲಿ $\frac{1}{4}$ ಭಾಗ ಎಂದರೆ ಇದರ ಉಪಯೋಗ ಪಡೆಯುವುದಕ್ಕೆ ಸಾಧ್ಯವಿಲ್ಲ ಎಂದು ಆಗಲೇ ಹೇಳಿದೆ. ಆದ್ದರಿಂದ ಗುತ್ತಿಗೆ ಗೊತ್ತುಮಾಡುವಾಗಲೂ ಸಂಸ್ಥಾನಾದ್ಯಂತ ಒಂದು ಯೂನಿಫಾರ್ಮಿಟಿ ಇರಬೇಕಾದದ್ದು ಒಳ್ಳೆಯದು. ಯೂನಿಫಾರ್ಮಿಟಿ ಕಾಪಾಡಬೇಕಾದರೆ, ಒಂದು ಯಾವ ಮೂಲಾಧಾರದಮೇಲೆ ಗುತ್ತಿಗೆಯನ್ನು ನಿರ್ಧರಮಾಡಬೇಕು ಎನ್ನುವುದು ಬಹಳಮುಖ್ಯ. ಬೆಳೆಯ ಆಧಾರದಮೇಲೆ ನಿರ್ಧರಮಾಡುವುದು ಅಸಾಧ್ಯ. ಏಕೆಂದರೆ ಬೆಳೆ ಎಷ್ಟು ಎನ್ನುವುದನ್ನು ಅಸೆಸ್ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಗುತ್ತಿಗೆಸಂಬಂಧದಲ್ಲಿ ತಿದ್ದುಪಡಿ ಈಗಿರತಕ್ಕ ರೀತಿಯಲ್ಲಿ

(ಶ್ರೀ ಎಸ್ ಗೋಪಾಲಗೌಡ.)

ರೈತನಿಗೆ ಯಾವ ಉಪಯೋಗವೂ ಆಗುವುದಿಲ್ಲ ಎನ್ನುವುದನ್ನು ಮಾತ್ರ ನಾನು ಹೇಳುತ್ತೇನೆ. ಇನ್ನು ಈ ವಿಷಯದಲ್ಲಿ ಮುಂದೆ ತಿದ್ದುಪಡಿಗಳನ್ನು ಮಂಡಿಸುವ ಸಂದರ್ಭಬದ್ದರೆ ಮಂಡಿಸಬಹುದು. ಬಹುಶಃ ಹೆಚ್ಚಿನ ಚರ್ಚೆಕೂಡಆಗದೇ ಇದು ಪಾಸ್ ಆದರೂ ಆಗಬಹುದು. ನನ್ನ ನಿರೀಕ್ಷೆ ಹಾಗೆ ಇದೆ. ಏಕೆಂದರೆ ಇದು ಮೊದಲೇ ಬಂದಂಥ ಒಂದು ಕಾನೂನು. ಅದಕ್ಕೆ ಈಗ ತಿದ್ದುಪಡಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಈ ದಿನ ನಾನು ಸರ್ಕಾರದವರಿಗೆ ಹೇಳುವುದು ಇಷ್ಟೇ. ಬಹಳ ನಿಷ್ಠೂರವಾಗಿ ಹೇಳಬೇಕಾಗಿದೆ. ಕಾನೂನಾದರೂ ಕೂಡ ರೂಲ್ಸ್ ಫ್ರೇಂ ಮಾಡದೇ ಈ ರೀತಿ ವಿಳಂಬ ಮಾಡಿದರೆ ಅವರಿಗೆ ಮತ್ತೆ ಈ ವಿಷಯದಲ್ಲಿ ಮಾತನಾಡುವುದಕ್ಕೂ ಕೂಡ ಯಾವ ಹಕ್ಕೂ ಉಳಿಯುವುದಿಲ್ಲ. ಅಂಥ ಒಂದು ಅವಕಾಶವನ್ನು ಅವರು ಮಾಡಿಕೊಳ್ಳದೆ ನಿಸ್ಪೃಹತೆಯಿಂದ ಕೆಲಸ ಮಾಡಲಿ ಎಂದು ಹೇಳಿ ಈ ಮಸೂದೆಗೆ ಬೆಂಬಲ ಕೊಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).— ಸ್ವಾಮಿ, ಶ್ರೀ ಗೋಪಾಲಗೌಡರು ಈಗತಾನೆ ಮಾತನಾಡಿದ್ದಾರೆ. ನಾನು ಈಗ ಸರ್ಕಾರದವರು ತಂದಿರುವ ಈ ಮಸೂದೆಯ ಮೆರಿಟ್‌ಮೇಲೆ ಏನಾದರೂ ಮಾತನಾಡಿದರೆ ಪ್ರಯೋಜನ ಉಂಟೇ ಎಂದರೆ ಏನೂ ಇಲ್ಲ ಎಂದು ಕಾಣುತ್ತದೆ. ಶ್ರೀ ಮರಿಯಪ್ಪನವರು ಅಪ್ಪಣೆ ಕೊಡಿಸಿದರು, ನಿಜವಾಗಿಯೂ ಸರ್ಕಾರದವರು ಕಾತುರರಾಗಿದ್ದಾರೆಯೇ, ಇಲ್ಲವೇ ಎಂದು ಅವರಿಗೂ ಅನುಮಾನ. ಸುಮ್ಮನೆ ಈ ಸಭೆಯ ಕಾಲವನ್ನು ವ್ಯರ್ಥಮಾಡುತ್ತೀರಲ್ಲಾ ಇದು ಯಾವ ನ್ಯಾಯ ಎಂದು ಪ್ರಶ್ನೆಹಾಕಿದರು ಎಂದಮೇಲೆ ಎಷ್ಟರಮಟ್ಟಿಗೆ ಅವರು ಕಾತುರರಾಗಿದ್ದಾರೆ ಎಂಬುದನ್ನು ನಾವು ಊಹಿಸಬಹುದು. ಎಲ್ಲರಿಗೂ ಗೊತ್ತಾಗುತ್ತದೆ. ಈ ಭೂಸುಧಾರಣೆ ಬಹಳ ಹಿಂದಿನ ಕಾಲದ್ದು. 1948ರಲ್ಲಿ ಶುರು ಮಾಡಿದರು. 1950 ರಲ್ಲಿ ಬಿಲ್ ಬಂತು, ಏಳೆಂಟು ದಿವಸ ಚರ್ಚೆ ಆಯಿತು. ಆ ಘಟ್ಟದಲ್ಲಿ ವಾಪಸು ತೆಗೆದುಕೊಂಡರು. ಮತ್ತೆ ಬರುವುದಕ್ಕೆ ನಾಲ್ಕು ವರ್ಷ ಬೇಕಾಯಿತು. ಇದರಲ್ಲೂ ಕೂಡ ಈ ಬಿಲ್ಲನ್ನು ಜಾರಿಗೆ ಕೊಡುವುದಕ್ಕಿಂತ ಮುಂಚೆಯೇ ಈ ತರಹ ಒಂದು ತಿದ್ದುಪಡಿಯನ್ನು ತಂದಿರುತ್ತೀರಿ ಎಂದಮೇಲೆ ಈ ತಿದ್ದುಪಡಿಯನ್ನು ಮಾಡಿದರೂ ಎಷ್ಟುಮಟ್ಟಿಗೆ ಇದರಿಂದ ಜನರಿಗೆ ಪ್ರಯೋಜನ ದೊರೆಯುತ್ತದೆ ಎಂಬುದರ ಬಗ್ಗೆ ಸಂದೇಹವಾಗಿದೆ. ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ ಪಾಸ್ ಮಾಡಿದಿರಿ, ಏನೂ ಪ್ರಯೋಜನವಾಗಲಿಲ್ಲ ; ನಾಳೆ ಚುನಾವಣೆ ಮಾಡುತ್ತೇವೆ ಎಂದಿರಿ, ಚುನಾವಣೆ ಕೂಡ ನಡೆಸಲಿಲ್ಲ.

ಅಧ್ಯಕ್ಷರು.—ಬಡ್ಜೆಟ್ ಭಾಷಣದಲ್ಲಿ ಅದನ್ನೆಲ್ಲ ಹೇಳಿ, ಈಗೇಕೆ ?

ಶ್ರೀ ಬಿ. ಹುಚ್ಚೇಗೌಡ.—ಈ ಬಿಲ್ಲುಗಳ ಅವಸ್ಥೆಯೆಲ್ಲಾ ಹೀಗೆಯೇ ಆಗುತ್ತಾ ಇರುವುದು. ಸರ್ಕಾರದವರು ತರತಕ್ಕ ಯಾವುದೇ ಒಂದು ನಿರ್ಣಯವಾಗಲಿ, ಬಿಲ್ ಆಗಲಿ ಅದಕ್ಕೆ ಒಂದು ಮಹತ್ವ ಕೊಡುವುದೂ ಕೂಡ ಅನಾವಶ್ಯಕ. ಅದರಿಂದ ಪ್ರಯೋಜನವೇನೂ ಇಲ್ಲ, ಈ ಭೂಸುಧಾರಣೆಗೆ ಮೂರು ಬಿಲ್ಲುಗಳನ್ನು ತಂದಿದ್ದಾರೆ. ಅದು ಹೇಗಾದರೂ ಇರಲಿ. ರೂಲ್ಸ್ ಫ್ರೇಂ ಮಾಡುವುದಕ್ಕೆ ಎಷ್ಟು ಕಾಲ ಬೇಕು ? ಬಿಲ್ಲು ಪಾಸ್ ಆಗಿ ಈಗಾಗಲೇ ಒಂದೂವರೆ ವರ್ಷ ಆಯಿತು. ಮೊನ್ನೆ ಧಾರ್ಮಿಕ ಸಂಬಂಧವಾದ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಬಿಲ್ಲು ಪಾಸ್ ಆಗಿದೆ. ಅದಕ್ಕೂ ರೂಲ್ಸ್ ಫ್ರೇಂ ಮಾಡಿ, ಜಾರಿಗೆ ಕೊಟ್ಟಿಲ್ಲ ಎಂದಮೇಲೆ ಇದರಲ್ಲಿ ಏನು ಪ್ರಯೋಜನವಿದೆ ? ಆದ್ದರಿಂದ ಸರ್ಕಾರದವರು ಮತ್ತೊಮ್ಮೆ, ಶ್ರೀ ವೆಂಕಟಪ್ಪನವರು ಹೇಳಿದಹಾಗೆ, ಈ ಬಿಲ್ಲನ್ನು ಪಾಸ್ ಮಾಡಿಸಿದರೆ ಎಷ್ಟು ಪ್ರಯೋಜನವೋ ಮಾಡಿಸದೇ ಇದ್ದರೂ ಅಷ್ಟೇ ಇರುವಾಗ ಇದನ್ನು ಈಗ ವಾಪಸು ತೆಗೆದುಕೊಂಡು ಯಾವಾಗ ಇಷ್ಟ ಬರುತ್ತದೆಯೋ ಆಗ ತಂದುಕೊಳ್ಳಲಿ. ದೇಶದಲ್ಲಿ ಅನೇಕ ಚಳವಳಿಗಳು ಬರಬಹುದು. ಆ ಚಳವಳಿ ನಡೆದಾಗ ಅದರ ಮೇಲೆ ಸರ್ಕಾರದವರು ಏನು ತೀರ್ಮಾನಕ್ಕೆ ಬರುತ್ತಾರೆಯೋ ಬರಲಿ ಎಂದು ಹೇಳುತ್ತೇನೆ.

2 P.M.

